that the Harijans are attending to their normal work without fear and that there is no tension either in Katral village or the neighbouring villages.

It is further reported that the police have maintained a strict vigil in the village. Regarding the action that was to be taken by the Deputy Commissioner and the Deputy Registrar of Co-operative Societies against the Vice-Chairman and the President and Secretary of the Society, respectively, I was trying to get the information whether action has been taken by the Deputy Commissioner to suspend them. I have not been able to get the information immediately. Nevertheless, if action is taken, well and good. If action has not been taken, I have given instructions to take action. Another information is that investigation of the case was completed and chargesheet placed against 24 persons on 11-4-1979 in the Court of Judicial Magistrate II Class, Bijapur.

(*ii*) *re : Non-payment of Compensation to agrieved family of the deceased due to elephant Menace in Arasal Range Shimoga District in 1974-75.*

† ಎಸ್, ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ)— ಮಾನ್ಯ ಅಧ್ಯಕ್ಷರೇ. ೧೯೭೪-೭೫ನೇ ಸಾಲಿನಲ್ಲಿ ಅರಸಾಳು ರೇಂಜಿನಲ್ಲಿ ಕಾಡಾನೆ ಹಾವಳಿಯಿಂದ ಮೂರು ಸಾವುಗಳಾಗಿವೆ. ಒಬ್ಬನನ್ನು ಕಾಲಿನಲ್ಲಿ ತುಳಿದೂ ತುಳಿದೂ ಸಾಯಿಸಿದ್ದರೆ. ಗದ್ದೆ ಕಾಯುತ್ತಿದ್ದ ಇನ್ನೊಬ್ಬನನ್ನು ಕಾಲಿನಲ್ಲಿ ಮೆಟ್ಟಿ ಮೆಟ್ಟಿ ತುಳಿದು ಸಾಯಿಸಿದೆ. ಈ ದಾರುಣ ಪರಿಸ್ಥಿತಿಯನ್ನು ನಾನು ಆಗ ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತಂದಾಗ, ಅವರಿಗೆ ಪರಿಹಾರ ಧನ ಮಂಜೂರ್ಮಾಡಲಾಗಿದೆ ಎಂದು ತಿಳಿಸಿದ್ದರು. ಆದರೆ ಇವತ್ತಿನ ವರೆಗೂ ಅವರಿಗೆ ಪರಿಹಾರ ಸಂದಾಯವಾಗಿಲ್ಲ. ಸುಮಾರು ೨೦ ವರ್ಷದ ಒಬ್ಬನೇ ಮಗನನ್ನು ಕಾಡಾನೆ ತುಳಿದು ಸಾಯಿಸಿರುವುದರಿಂದ, ಮಗನನ್ನು ಕಳೆದುಕೊಂಡ ದಂಪತಿಗಳಿಗೆ ಇಂದು ಯಾರೂ ಗತಿ ಇಲ್ಲದಂತಾಗಿದೆ, ಆದುದರಿಂದ, ಅವರ ಬಾಳಿನಲ್ಲಿ ಕಣ್ಣೀರನ್ನೊರೆಸುವ ಸಲುವಾಗಿ ಪರಿಹಾರ ಕೊಡಬೇಕೆಂದು ನಾನು ನಿಯಮ ೩೧೨ರ ಕೆಳಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು)— ೧೯೭೪-೭೫ರಲ್ಲಿ, ಅರಸಾಳು ರೇಂಜಿನಲ್ಲಿ ಕಾಡಾನೆ ಹಾವಳಿಯಿಂದ ಮೂರು ಜನ ವ್ಯಕ್ತಿಗಳು ಸಾವಿಗೀಡಾದ ಸಂಗತಿ ನಿಜ. ಅರಸಾಳು ಬಳಿಯಲ್ಲಿ ಒಬ್ಬರು, ಅರಸಾಳು ಬಳಿಯಿರುವ ಚಿನ್ನಿಕಾನೆಯಲ್ಲಿ ಇನ್ನೊಬ್ಬರು ಹಾಗೂ ಅರಸಾಳು ರೇಂಜಿನ ಬಳಿ ಇರುವ ಸಂಡೂರಿನಲ್ಲಿ ಮತ್ತೊಬ್ಬರು ಸಾವಿಗೀಡಾದರು. ೧೯೭೪-೭೫ನೇ ಸಾಲಿನಲ್ಲಿ ಇಂಥ ಪ್ರಕರಣಗಳಲ್ಲಿ ಪರಿಹಾರ ನೀಡುವ ಏರ್ಪಾಟು ಇಲ್ಲದ್ದರಿಂದ ಅರಣ್ಯ ಇಲಾಖೆಯು ಸಾವಿಗೀಡಾದ ವ್ಯಕ್ತಿಗಳ ಕುಟುಂಬದವರಿಗೆ ಯಾವ ಪರಿಹಾರವನ್ನೂ ನೀಡಲಿಲ್ಲ. ಕಾಡಾನೆ ಹಾವಳಿಯಿಂದ ವ್ಯಕ್ತಿಗಳು ಸಾವಿಗೀಡಾದ ಪ್ರಕರಣಗಳಲ್ಲಿ, ಆ ಕುರಿತು ಸಂಬಂಧಪಟ್ಟ ಅಸಿಸ್ಟೆಂಟ್ ಸರ್ಜನ್ ಅಥವಾ ಡಿಸ್ಪೆನ್ಸರಿ ಸರ್ಜನ್‌ರವರು ನೀಡಿದ ಶವ ಪರೀಕ್ಷಾ ವರದಿಯ ಆಧಾರದ ಮೇಲೆ ಆ ಪ್ರಕರಣವು ನಿಜವಾದುದೆಂದು ಅರಣ್ಯ ಸಂರಕ್ಷಣಾಧಿಕಾರಿಗೆ ಮನವರಿಕೆಯಾದರೆ, ಪರಿಹಾರವನ್ನು ಸಂದಾಯ ಮಾಡಬಹುದೆಂದು ೧೯೭೮ರ ಅಕ್ಟೋಬರ್ ತಿಂಗಳಿನಲ್ಲಿ ಸರ್ಕಾರದವರು ಆದೇಶ ಹೊರಡಿಸಿದ್ದಾರೆ. ಈಗಿನ ನಿಯಮಗಳ ಪ್ರಕಾರ ಕಾಡಾನೆಗಳ ಹಾವಳಿಯಿಂದ ಸಾವಿಗೀಡಾದ ವ್ಯಕ್ತಿಗಳ ಕುಟುಂಬದವರಿಗೆ ಅಥವಾ ಕಾನೂನು ಸಮ್ಮತ ವಾರಸುದಾರರಿಗೆ ೨,೦೦೦ ರೂಪಾಯಿಯವರೆಗೆ ಪರಿಹಾರವನ್ನು ಸಂದಾಯ ಮಾಡಲಾಗುವುದು.

ಮೇಲೆ ಹೇಳಿದ ಮೂರು ಜನರ ಸಾವಿಗೆ ಕಾರಣವಾದ ಕಾಡಾನೆಯನ್ನು ಗುಂಡಿಕ್ಕಿ ಕೊಲ್ಲಲು ಆದೇಶ ನೀಡಲಾಗಿತ್ತು. ಕೊಲ್ಲುವ ಪ್ರಯತ್ನವನ್ನೂ ಮಾಡಲಾಯಿತು. ಆದರೂ ಅದನ್ನು ಕೊಲ್ಲಲು ಸಾಧ್ಯವಾಗಲಿಲ್ಲ. ಆ ತರುವಾಯ ಇಂಥ ಸಾವಿನ ಪ್ರಕರಣಗಳು ಪರಿಯಾಗಿಲ್ಲ. ಆದಕಾರಣ ಹೆಚ್ಚಿನ ಕ್ರಮ ಕೈಗೊಳ್ಳಲಿಲ್ಲ.

ಸಧ್ಯಕ್ಕೆ ಅರಸಾಳು ರೇಂಜಿನಲ್ಲಿ ಕಾಡಾನೆಗಳಿಂದ ಹಾವಳಿ ನಡೆದಿಲ್ಲ. ಆದರೂ, ಶಿವಮೊಗ್ಗ ವಿಭಾಗದಲ್ಲಿ ಕಾಡಾನೆಗಳ ಓಡೋಂದು ಸ್ಥಳದಿಂದ ಸ್ಥಳಕ್ಕೆ ಓಡಾಡುತ್ತಿದೆ. ಮೂರು ತಿಂಗಳಂದೀಚೆಗೆ ಅರಸಾಳಿನಲ್ಲಿ ಸುತ್ತಮುತ್ತ ಕಾಡಾನೆ ಹಿಂಡು ಕಾಣಿಸಿಕೊಂಡಿಲ್ಲ. ಅರಸಾಳು ರೇಂಜಿನಲ್ಲಿ ಕಾಡಾನೆಗಳ ಹಾವಳಿಯಿಂದ ಬೆಳೆ ನಾಶವಾದ ಬಗ್ಗೆ ಯಾವ ವರದಿಗಳೂ ಬಂದಿಲ್ಲ. ಅರಸಾಳಿನ ಪತ್ತಿರವಿರುವ ಸುಡೂರು ಗೇಟ್‌ನಲ್ಲಿ ಇಲಾಖೆಯ ೫ ಆನೆಗಳನ್ನು ಇರಿಸಲಾಗಿದೆ. ಇವು ಅರಣ್ಯ ಇಲಾಖೆಗೆ ಸೇರಿದ ಆನೆಗಳಾಗಿರುವುದರಿಂದ ಹಾಗೂ ಇವು ಮೇಯುವ ಸ್ಥಳಗಳು ಅರಣ್ಯದ ಒಳ ಪ್ರದೇಶಗಳಲ್ಲಿರುವುದರಿಂದ, ಸುತ್ತಮುತ್ತಲಿನ ಜಮೀನಿನಲ್ಲಿ ಬೆಳೆದು ನಿಂತ ಪೈರಿಗೆ ಇವುಗಳಿಂದ ಹಾನಿಯಾಗಿಲ್ಲ. ಈ ಪ್ರದೇಶದ ಜನರಿಂದ ಪರಿಹಾರ ಕೋರಿ ಯಾವ ಪುನವಿಯೂ ಬಂದಿಲ್ಲ.

ಶಿವಮೊಗ್ಗ ವಿಭಾಗದ ಕೆಲವು ಜನ ರೈತರು ಮಾತ್ರ ಪರಿಹಾರ ಕೋರಿ ಮನವಿಮಾಡಿಕೊಂಡಿದ್ದಾರೆ. ಈ ರೈತರು ತೀರ್ಥಹಳ್ಳಿ ಮತ್ತು ಆಯನೂರು ರೇಂಜಿಗೆ ಸೇರಿದವರಾಗಿದ್ದಾರೆ. ಈ ಜನರಿಗೆ ಪರಿಹಾರ ಸಂದಾಯ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ಎಂ. ಶೀರ್ನಳ್ಳಿ (ಹುಂಸೂರು)—ಇತ್ತೀಚೆಗೆ ಅಲ್ಲಿ ಆನೆಗಳ ಹಾವಳಿ ಇಲ್ಲವೆಂದು ಮಾನ್ಯ ಸಚಿವರು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ಪನ್ಯಮೃಗ ರಕ್ಷಣೆಯ ಕಾನೂನಿಂದಾಗಿ ನಮ್ಮ ರೈತರು ಆನೆಗಳಿಗೆ ಅಥವಾ ಇತರ ಕಾಡು ಮೃಗಗಳಿಗೆ ಯಾವ ರೀತಿ ಹಿಂಸೆ ಮಾಡದ ಹಾಗಾಗಿ ಪಡಬಾರದ ಕಷ್ಟಪಡುತ್ತಿದ್ದಾರೆ. ಪ್ರತಿ ವರ್ಷ ಅಲ್ಲಿನ ಬೆಳೆಗಳು ಕಾಡು ಮೃಗಗಳ ಕಾಟದಿಂದ ಹಾಳಾಗುತ್ತಿದೆ. ಪದೇ ಪದೇ ಈವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತಂದರೂ, ಯಾವುದೇ ರಕ್ಷಣೆಯನ್ನವರು ನೀಡುತ್ತಿಲ್ಲ ಕಾಡಾನೆಗಳಿಂದ ಬೆಳೆಗಳು ಹಾಳಾಗಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿರುವುದು ಸತ್ಯಕ್ಕೆ ದೂರವಾದುದು. ಇತ್ತೀಚೆಗೆ ಅನೇಕ ಗದ್ದೆಗಳಲ್ಲಿ ಆನೆ ಹಾವಳಿ ಮಾಡಿರುವುದನ್ನೂ ಮತ್ತು ಅವುಗಳ ಹೆಜ್ಜೆ ಗುರುತನ್ನೂ ತಮಗೆ ತೋರಿಸಬಲ್ಲೆ; ಪರಿಸ್ಥಿತಿ ಹೀಗಿರುವಾಗ ತಾವು ರೈತರಿಗೆ ಪರಿಹಾರ ಒದಗಿಸಬೇಕಾಗುತ್ತದೆ. ಮತ್ತು ಅಂದು ಆನೆಯ ತುಳಿತಕ್ಕೆ ಸತ್ತವರಿಗೆ ಈಗಲಾದರೂ ಪರಿಹಾರ ಕೊಡಲಿಕ್ಕೆ ಆಜ್ಞೆ ಮಾಡುವಿರಾ ?

ಶ್ರೀ ಜಿ. ರಾಮೇಗೌಡ—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಎರಡನೆ ಪ್ರಶ್ನೆಗೆ ನಾನು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ೧೯೭೪-೭೫ರಲ್ಲಿ ಆನೆಯ ಹಾವಳಿಯಿಂದ ಸತ್ತವರಿಗೆ ಪರಿಹಾರ ಕೊಡಬೇಕೆನ್ನುವ ವಿಚಾರವನ್ನು ಈಗ ತೆಗೆದುಕೊಂಡರೆ ಅವರಿಗೆ ಎಷ್ಟು ಕೊಡಬೇಕಾಗುತ್ತದೆನ್ನುವ ಅಂಕಿ-ಅಂಶ ನನ್ನಲ್ಲಿಲ್ಲ. ಆದುದರಿಂದ, ಆ ಬಗ್ಗೆ ಆಜ್ಞೆಯನ್ನು ಹೊರಡಿಸುವ ಸಾಧ್ಯತೆಯೂ ಇಲ್ಲ. ಆದರೆ ಈಗ ಕೊಡುತ್ತಿರುವ ಎರಡು ಸಾವಿರ ರೂಪಾಯಿಗಳ ಪರಿಹಾರ ಧನವನ್ನು ಹೆಚ್ಚಿಸಬೇಕೆಂದು ನನ್ನ ಮನಸ್ಸಿನಲ್ಲಿದೆ. ಜನರು ಸಾಯಬೇಕಾಲದ ಹೊತ್ತು ಚೆನ್ನಾಗಿ ಕುಡಿದು ರಸ್ತೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾಟುವಾಗ ಆನೆಗಳನ್ನು ಮಾತನಾಡಿಸಿದರೆ, ಅವನು ಕೊಲ್ಲಲ್ಪಡಬಹುದಲ್ಲವೆ ? ಇಂತಹ ಸಂದರ್ಭಗಳಲ್ಲಿ ಸತ್ತವರಿಗೆ ಪರಿಹಾರ ಧನ ಕೊಡುವುದಕ್ಕೆ ಬರುವುದಿಲ್ಲ. ಚೆನ್ನಾಗಿ ಕುಡಿದು, ಆನೆ ಬಂದದ್ದೂ ಗೊತ್ತಾಗದೆ ರಸ್ತೆಯಲ್ಲಿ ಬಿದ್ದಿದ್ದಾಗ ಆನೆ ಆತನನ್ನು ತುಳಿದು ಸಾಯಿಸಿರುವ ವಿಚಾರವೂ ಸರ್ಕಾರದ ಗಮನಕ್ಕೆ ಬಂದಿದೆ. ಇಂಥಾವನ್ನು ಕೊಡುವುದಕ್ಕಾಗುವುದಿಲ್ಲವೆಂದು ನನ್ನ ವೈಯಕ್ತಿಕ ಅಭಿಪ್ರಾಯ. ಒಂದು ಕಡೆ ಯಾವ ಜನರು ತಮ್ಮ ಅಸ್ತಿ ಪಾಸ್ತಿ ಆಗಲಿ ಜಮೀನಿನಲ್ಲಿ ಇಟ್ಟು ಬೆಳೆಯನ್ನು ಆಗಲಿ ಕಾದುಕೊಂಡು ಕುಳಿತಿರುತ್ತಾರೆ. ಅಂಥವರನ್ನು ಈ ಕಾಡಾನೆಗಳು ಬೆದರಿಸಿ ತುಳಿದು ಸಾಯಿಸಿದರೆ ಅಂಥವರಿಗೆ ೨ ಸಾವಿರಕ್ಕಿಂತ ಹೆಚ್ಚಿಗೆ ಪರಿಹಾರ ಕೊಡಬಾರದೆಂದು ಅಭಿಪ್ರಾಯ ಬಂದಿದೆ. ಆದರೆ ಈಗ ಇರುವ ಪರಿಹಾರವನ್ನು ಕೊಡುವ ಪದ್ಧತಿಯನ್ನೇ ನಾವು ತೆಗೆಯಬೇಕೆಂದಿರುವಾಗ ೧೯೭೫ ರಿಂದ ತೊಂದರೆಗೆ ಒಳಗಾಗಿರುವವರಿಗೆ ಕೊಡಬೇಕೆಂದು ತಾವು ಹೇಳುವುದಾದರೆ ಅದು ಸಾಧ್ಯವಿಲ್ಲದ ಮಾತು.

ಇನ್ನೊಂದು ಕಡೆ ಕಾಡಾನೆಗಳ ಕಾಟ ಬಹಳವಾಗಿದೆ ಎಂದು ಒಂದು ಅಭಿಪ್ರಾಯ ಯಾವ ಭಾಗದಲ್ಲಿ ಈ ಕಾಡಾನೆಗಳಿಂದ ತೊಂದರೆಯಾಗಿದೆ ಎಂದು ಸರ್ಕಾರಕ್ಕೆ ವರದಿ ಬಂದಿದೆ, ಅಂಥ ಕಡೆಗಳಲ್ಲಿ ಸಂಬಂಧ

ಪಟ್ಟ ಪಂಚಾಯ್ತಿಯವರಿಂದ ಮಹಜರು ಮಾಡಿಸಿ ಅವರಿಗೆ ಕೊಡಬೇಕಾದ ಪರಿಹಾರವನ್ನು ಹಿಂಜರಿಯದೆ ಕೊಟ್ಟಿದ್ದೇವೆ. ಇದುವರೆಗೆ ಯಾವುದೂ ಕೊಡದೇ ಇರುವುದು ಇಲ್ಲ. ಒಂದು ವೇಳೆ ಅಂಥ ಪರಿಹಾರ ಕೊಡದೇ ನಿಂತಿರತಕ್ಕ ಪ್ರಕರಣ ಇದ್ದರೆ ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ೮ ದಿವಸ ಗಳಲ್ಲಿ ಅದನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ – ಪರಿಹಾರ ಕೊಡುವುದು ಬಹಳ ದಿವಸದಿಂದ ನಿಂತಿರು ವುದರಿಂದಲೇ ನಾನು ಈ ಪ್ರಶ್ನೆಯನ್ನು ಇಲ್ಲಿ ಹಾಕಿರುವುದು. ನಿಮ್ಮ ಅಧಿಕಾರಿಗಳು ಯಾವ ಆಧಾರದ ಮೇಲೆ ತಮಗೆ ವರದಿಯನ್ನು ಕೊಡುತ್ತಾರೆ ನನಗೆ ಗೊತ್ತಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ ನಾನು ಪ್ರವಾಸ ಹೋದಾಗ ಈ ವಿಚಾರ ನನ್ನ ಗಮನಕ್ಕೆ ಬಂತು. ಕೂಡಲೇ ತಮಗೆ ಒಂದು ಪತ್ರವನ್ನು ಬರೆದು ಕಳು ಹಿಸಿದ್ದೇನೆ ನಂತರ ಈಗ ಈ ಸದನದ ಮುಂದೆಯೂ ತರುತ್ತಿದ್ದೇನೆ. ತಾವು ಉತ್ತರವನ್ನು ಕೊಡು ತ್ತಿರುವುದನ್ನು ನೋಡಿದರೆ, ನಾನು ಇಲ್ಲಿ ಹೇಳುತ್ತಿರುವುದೆಲ್ಲಾ ಪೂರಾ ಸುಳ್ಳು ಎಂದು ಹೇಳುವಂತಿದೆ. ಅರಸು ಳು ಮತ್ತು ನಾನು ಹೇಳಿದ ಈ ಸ್ಥಳದಲ್ಲಿ ಬಹಳಷ್ಟು ನಷ್ಟವಾಗಿದೆ. ಆದ್ದರಿಂದ ಈಗಲಾದರೂ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ರಾಮೇಗೌಡ—ತಾವು ಸತ್ಯಕ್ಕೆ ದೂರವಾದುದನ್ನು ಯಾವತ್ತೂ ಹೇಳುವುದಿಲ್ಲ. ಮತ್ತು ನೀವು ಸತ್ಯಕ್ಕೆ ದೂರವಾದದ್ದನ್ನು ಹೇಳಿದ್ದೀರಿ ಎಂದು ನಾನೂ ಹೇಳಿಲ್ಲ. ನಮ್ಮಿಬ್ಬರಲ್ಲೂ ಯಾವುದೇ ಮನಸ್ತಾಪವಿಲ್ಲ. ಆದರೆ ನನಗೆ ಯಾರಿಂದಲೂ ಯಾವ ಅರ್ಜಿಯೂ ಈ ಬಗ್ಗೆ ಬರದೇ ಇರುವುದರಿಂದ ನಾನು ಏನೂ ಮಾಡುವುದಕ್ಕಾಗಿಲ್ಲ. ಅವರ ಅರ್ಜಿ ಬಂದು ಅದು ರುಜುವಾತು ಆದರೆ ಖಂಡಿತ ಅವರಿಗೆ ಪರಿಹಾರ ಕೊಡಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ—ಮಾನ್ಯ ಅಧ್ಯಕ್ಷರೇ, ತಾ॥ ೧೨-೪-೧೯೭೯ರಲ್ಲಿ ನಾನು ತಮಗೆ ಒಂದು ನಿರ್ಣಯವನ್ನು ರೂಲ್ ೩೧೨ರ ಕೆಳಗೆ ಕಳುಹಿಸಿಕೊಟ್ಟಿದ್ದೆ. ಅದಕ್ಕೆ ತಾವು ಉತ್ತರ ಕೊಟ್ಟು ಈಗ ಇದನ್ನು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟ ಡಿಪ್ಯಾಂಡ್ ಬಂದಾಗ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ತಾವು ಸೂಚಿಸಿದ್ದೀರಿ. ಆದ್ದರಿಂದ ಈ ದಿವಸ ನಾನು ಹೆಚ್ಚು ಕಾಲಪನ್ನು ತೆಗೆದುಕೊಳ್ಳದೆ ಕೇವಲ ಒಂದೆರಡು ಸಲಹೆಗಳನ್ನು ಮಾತ್ರ ಕೊಡ ಬಯಸುತ್ತೇನೆ. ಅದಕ್ಕೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು ತಮ್ಮ ಸಲಹೆಗಳನ್ನು ಕೇವಲ ೫ ನಿಮಿಷಗಳಲ್ಲಿ ಮುಗಿಸುವಂತಿದ್ದರೆ ತಾವು ಸಲಹೆ ಯಿಡುವುದರಲ್ಲಿ ನನ್ನ ಆಭ್ಯಂತರವೇನೂ ಇಲ್ಲ.

Budget Estimates for 1979-80

Demands for Grants:

Demand Nos : 11, 25 and 61, (Debate Continued)

† SRI JEEVARAJ ALVA (Jayamahal):—Mr Speaker, Sir, for all logical purposes, I will be initiating the debate on the demands relating to the Youth Services, because earlier speakers my colleague Smt. Pramila, Smt. Anusuya Gajanana Sharma and others on the other side also have only confined themselves to the Women and Children's Welfare. I therefore only request the Hon ble Speaker to allow me five more minutes in addition to ten minutes he has already aotted. It was a very interesting debate last time and the ⅔ majority of younger M.L As from both the sides spoke and stressed the importance of the Youth Services Department and we all strongly recommended to the House and to the Government that the Youth Services